ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 21/2021**

**ಪ್ರಾಸಾ- 12 ಚಾಸಾ- 15**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶಕುಂತಲಾ |
| ಗಂಡನ ಹೆಸರುಃ | : | ನಿಂಗರಾಜು |
| ವಯಸ್ಸುಃ | : | 54 ವರ್ಷ |
| ಉದ್ಯೋಗಃ | : | ಪಿಐ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-05-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ದಿನಾಂಕ 22-9-19 ರಿಂದ 19-10-23 ರವರೆಗೆ ಹಳೇಬೀಡು ಪಿ ಎಸ್ ನಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 10-1-20ರಂದು ನಾನು ಠಾಣೆಯಲ್ಲಿದ್ದಾಗ ಮಧ್ಯಾಹ್ನ 12-05 ಗಂಟೆಗೆ ಹೆಚ್.ಸಿ 318ರವರು ಚಾಸಾ-1 ರವರ ಹೇಳಿಕೆ ಪಡೆದು ತಂದು ನನ್ನ ಮುಂದೆ ಹಾಜರುಪಡಿಸಿದ್ದನ್ನು ಈಗಾಗಲೇ ಗುರುತಿಸಿರುವ ನಿಪಿ-1 ರಂತೆ ಸ್ವೀಕರಿಸಿದೆನು. ನಂತರ ಠಾಣಾ ಮೊಕದ್ದಮೆ ಸಂಖ್ಯೆ 3/20ರಂತೆ ಕೇಸು ದಾಖಲಿಸಿ ಪ್ರ.ವ.ವ.ಯನ್ನು ನಿಪಿ-10ರಂತೆ ನ್ಯಾಯಾಲಯಕ್ಕೂ ಪ್ರತಿಯನ್ನು ಮೇಲಧಿಕಾರಿಗಳಿಗೂ ಸಲ್ಲಿಸಿರುತ್ತೇನೆ. ಅವುಗಳಲ್ಲಿ ನನ್ನ ರುಜು ಇದ್ದು ನಿಪಿ-1(ಸಿ) ಮತ್ತು ನಿಪಿ-10(ಎ) ಎಂದು ಗುರುತಿಸಲಾಯಿತು. ನಿಪಿ-1 ರೊಂದಿಗೆ ನಿಪಿ-8ರ ಮೆಮೋ ಕೂಡ ಹಾಜರುಪಡಿಸಿದ್ದರು. ಅದರಲ್ಲಿ ನನ್ನ ರುಜು ಇದ್ದು ನಿಪಿ-8(ಸಿ) ಎಂದು ಗುರುತಿಸಲಾಯಿತು.

3.ಅದೇ ದಿನದಂದು ಬೆಳಿಗ್ಗೆ 7 ಗಂಟೆಗೆ ಕೃತ್ಯಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಚಾಸಾ-2

ರವರು ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಈಗಾಗಲೇ ಗುರುತಿಸಿರುವ ನಿಪಿ-3 ರಂತೆ ಪಂಚನಾಮೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-3(ಸಿ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಸ್ಥಳದಲ್ಲಿದ್ದ ಎಂ.ಒ.1 ರಿಂದ 3 ನ್ನು ವಶಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ ಬಂದು ಅವುಗಳನ್ನು ಮಾಲುಪಟಿ

ಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

4.ಅದೇ ದಿನ ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳ ವಾರ್ಡ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-1 ರವರನ್ನು ವಿಚಾರಣೆ ಮಾಡಿ ಅವರ ಮರುಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಆರೋಪಿತರ ಪತ್ತೆಗಾಗಿ ಚಾಸಾ-13 ರವರನ್ನು ನೇಮಕ ಮಾಡಿದ್ದು ಸದರಿಯವರು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ಸದರಿ ಆರೋಪಿತರನ್ನು ತಂದು ಹಾಜರುಪಡಿಸಿದ ಮೇರೆಗೆ ಆತನನ್ನು ವಿಚಾರಣೆಗೊಳಪಡಿಸಿ, ಆತನ ಸ್ವಇಚ್ಛಾ ಹೇಳಿಕೆ ಮಾಡಿಕೊಂಡಿರುತ್ತೇನೆ. ಆತನು ತಾನು ಕೃತ್ಯ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆತನ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಗೈರುಹಾಜರಿದ್ದು ಆತನ ಗುರುತಿನ ಬಗ್ಗೆ ತಕರಾರಿಲ್ಲವೆಂದು ವಕೀಲರು ಹೇಳಿರುತ್ತಾರೆ)

5.ಚಾಸಾ-2 ಮತ್ತು 3 ರವರನ್ನು ದಿನಾಂಕ 11-1-20ರಂದು ಠಾಣೆಗೆ ಕರೆಸಿಕೊಂಡು ಅವರ ಹೇಳಿಕೆಗಳನ್ನು  ಮಾಡಿಕೊಂಡಿರುತ್ತೇನೆ. ಚಾಸಾ-3 ರವರು ನನ್ನ ಸಮಕ್ಷಮ ನಿಪಿ-2 ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ-2 ರವರು ನನ್ನ ಸಮಕ್ಷಮ ನಿಪಿ-4 ರಂತೆ ಹೇಳಿಕೆ ನೀಡಿರುತ್ತಾರೆ.

6.ದಿನಾಂಕ 14-1-20ರಂದು ಚಾಸಾ-1 ರವರು ಕೃತ್ಯಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಅವರ ತಂದೆ ಚಂದ್ರಶೇಖರ್ ರವರು ತಂದು ಹಾಜರುಪಡಿಸಿದರು. ಅದನ್ನು ಪರಿಶೀಲಿಸಿದಾಗ ಅದು ತುಂಬುತೋಳಿನ ಕಪ್ಪು ಮತ್ತು ಬಿಳಿ ಬಣ್ಣದ ಚುಕ್ಕಿಯ ಶರ್ಟ್ ಆಗಿತ್ತು. ಪ್ಯಾಂಟು ಬಿಸ್ಕೆಟ್ ಬಣ್ಣದ್ದಾಗಿತ್ತು. ಪ್ಯಾಂಟಿನ ಎಡಕಾಲಿನ ತೋಳು ಅಲ್ಲಲ್ಲಿ ಸುಟ್ಟಂತೆ ಕಪ್ಪುಬಣ್ಣದ ಮಸಿಯಾಗಿರುವ ನಿಶಾನೆ ಕಂಡುಬಂತು.

ಪ್ಯಾಂಟಿನ ಬಲಬದಿಯಲ್ಲಿ ಕಪ್ಪುಬಣ್ಣದ ಮಸಿಯಾಗಿತ್ತು. ಎಡಭಾಗದಲ್ಲಿ ಅಲ್ಲಲ್ಲಿ ಮಾಸಲು ಕೆಂಪು ಬಣ್ಣ ಇತ್ತು. ಇದನ್ನು ಪಂಚರಾದ ಚಾಸಾ-8 ಮತ್ತು 9ರವರ ಸಮಕ್ಷಮ ವಶಪಡಿಸಿಕೊಂಡು ನಿಪಿ-5 ರಂತೆ ಪಂಚನಾಮೆ ನಡೆಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-5(ಡಿ) ಎಂದು ಗುರುತಿಸಲಾಯಿತು. ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದಿರುವ ಎಂ.ಒ.4 ಮತ್ತು 5 ಆಗಿರುತ್ತವೆ. ಅದೇ ದಿವಸ ಚಾಸಾ-6 ಮತ್ತು 7ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಚಾಸಾ-7ರವರು ನನ್ನ ಮುಂದೆ ನಿಪಿ-7ರಂತೆ ಹೇಳಿಕೆ ನೀಡಿರುತ್ತಾರೆ.

7.ದಿನಾಂಕ 20-1-20ರಂದು ಕಾ.ಸಂ.ಒ.ಬಾಲಕನ ಪತ್ತೆಗಾಗಿ ಚಾಸಾ-13 ರವರನ್ನು ನೇಮಕ ಮಾಡಿದ್ದೆನು. ಆತನ ಪತ್ತೆಯಾಗಲಿಲ್ಲ.

8.ದಿನಾಂಕ 22-1-20 ರಂದು ನಿಪಿ-9ರಂತೆ ಹಿಮ್ಸ್ ಆಸ್ಪತ್ರೆಗೆ ಗಾಯಾಳುವಿನ ಗಾಯದ ಪ್ರಮಾಣಪತ್ರ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ.

9.ದಿನಾಂಕ 14-2-20ರಂದು ಕಾ.ಸಂ.ಒ.ಬಾಲಕನ ಜನ್ಮದಿನಾಂಕದ ದೃಢೀಕರಣ ಪತ್ರವನ್ನು ಪಿಸಿ 764 ರವರು ತಂದು ಹಾಜರುಪಡಿಸಿದ್ದನ್ನು ಈಗಾಗಲೇ ಗುರುತಿಸಿರುವ ನಿಪಿ-6ರಂತೆ ಸ್ವೀಕರಿಸಿದೆನು. ಅದರಲ್ಲಿ ನನ್ನ ರುಜು ಇದ್ದುನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಂತೆ ಆತ 16 ವರ್ಷ ವಯಸ್ಸಿನವನಾಗಿದ್ದರಿಂದ ಆತನ ಮೇಲೆ ಪ್ರಕರಣವನ್ನು ಬಾಲನ್ಯಾಯಮಂಡಳಿಗೆ ಸಲ್ಲಿಸಿರುತ್ತೇನೆ.

10.ದಿನಾಂಕ 5-3-20ರಂದು, ಪ್ರಕರಣದಲ್ಲಿ ವಶಪಡಿಸಿಕೊಂಡ ಎಂ.ಒ.4 ಮತ್ತು 5 ನ್ನು ಪಿಸಿ-764 ರವರ ಜೊತೆ ಮೇಲಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 6-3-20ರಂದು ಮೈಸೂರಿನ ಆರ್ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ಸದರಿ ಕಛೇರಿಯಿಂದ ಆ ವಸ್ತುಗಳಲ್ಲಿ ಸುಟ್ಟ ವಸ್ತುಗಳಾಗಿದ್ದರಿಂದ ಅವುಗಳನ್ನು ಪರೀಕ್ಷಿಸಲು ಬೆಂಗಳೂರಿಗೆ ಕಳುಹಿಸಿಕೊಡಬೇಕೆಂದು ನಮಗೆ ವಾಪಸ್

ಕಳುಹಿಸಿಕೊಟ್ಟಿರುತ್ತಾರೆ.

11.ದಿನಾಂಕ 10-3-20 ರಂದು ಚಾಸಾ-1 ರವರ ಅಪಘಾತ ವಹಿಯ ಯಥಾ ನಕಲನ್ನು ನಿಪಿ-11 ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-11(ಎ) ಎಂದು ಗುರುತಿಸಲಾಯಿತು.

12.ದಿನಾಂಕ 16-3-20ರಂದು ಎಂ.ಒ.4 ಮತ್ತು 5 ನ್ನು ಬೆಂಗಳೂರಿನ ಎಫ್ ಎಸ್ ಎಲ್ ಗೆ ಸಿಬ್ಬಂದಿ ಮೂಲಕ ಕಳುಹಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದ ರಹದಾರಿಯನ್ನು ನೋಡುತ್ತಿದ್ದು ನಿಪಿ-12 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು ನಿಪಿ-12(ಎ) ಎಂದು ಗುರುತಿಸಲಾಯಿತು. ದಿನಾಂಕ 20-3-20ರಂದು ಪಿಸಿ 694 ರವರು ಸದರಿ ವಸ್ತುಗಳನ್ನು ಬೆಂಗಳೂರು ಎಫ್ ಎಸ್ ಎಲ್ ಗೆ ಕೊಟ್ಟು ಬಂದು ನನ್ನ ಮುಂದೆ ಸ್ವೀಕೃತಿ ಹಾಜರುಪಡಿಸಿರುತ್ತಾರೆ.

13.ದಿನಾಂಕ 30-4-20ರಂದು ಮತ್ತೆ ಕಾ.ಸಂ.ಒ.ಬಾಲಕನ ಪತ್ತೆಗೆ ಸಿಬ್ಬಂದಿ ನೇಮಕ ಮಾಡಿರುತ್ತೇನೆ. ಆದರೂ ಆತನ ಪತ್ತೆಯಾಗಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**